# , ರ , ,ಲ , ಅಕ್ಷರದ ವಚನದ ಅರ್ಥ

1)ರತ್ನದ ಸಂಕೋಲೆಯಾದರೆ ತೊಡರಲ್ಲವೆ?
ಮುತ್ತಿನ ಬಲೆಯಾದರೆ ಬಂಧನವಲ್ಲವೆ?
ಚಿನ್ನದ ಕತ್ತಿಯಲ್ಲಿಹೊಯ್ದರೆ ಸಾಯದಿಪ್ಪರೆ?
ಲೋಕದ ಭಜನೆಯ ಭಕ್ತಿಯಲ್ಲಿ ಸಿಲುಕಿದರೆ
ಜನನ ಮರಣ ಬಿಡುವುದೆ ಚೆನ್ನ ಮಲ್ಲಿಕಾರ್ಜುನ.

## ಪದಗಳ ಅರ್ಥ

ಸಂಕೋಲೆ-ಕೈಕೋಳ, ಬೇಡಿ,
ತೊಡರು-ಅಡ್ಡಿ,
ಮುತ್ತಿನ ಬಲೆ-ನವರತ್ನದ ಬಲೆ,
ಹೊಯ್-ಹೊಡೆ, ಕತ್ತರಿಸು,
ಭಜನೆಯಭಕ್ತಿ-ಸಾಮೂಹಿಕ ಗಾಯನ

## ವಚನದ ಅರ್ಥ

ಮನುಷ್ಯನ ಬದುಕನ್ನು ಕುರಿತಾದ ಚಿಂತನೆ ಇಲ್ಲಿದೆ.ವಾಸ್ತವದ ನೆಲೆಯಲ್ಲಿ ಬದುಕನ್ನು ವಿಶ್ಲೇಷಿಸುವ ಪ್ರಯತ್ನ ಈವಚನದಲ್ಲಿದೆ.ರತ್ನದ ಸಂಕೋಲೆ, ಚಿನ್ನದ ಕತ್ತಿ ಮುತ್ತಿನಬಲೆ ಮೂರು ಉಪಮೆಗಳಿವೆ.ಕೊನೆಗೆ ಹುಟ್ಟು ಸಾವು ಯಾರಿಗೂ ಬಿಟ್ಟದಲ್ಲ ಎನ್ನುವ ವಸ್ತು ಸತ್ಯ ಇಲ್ಲಿದೆ. ಎಂತೆಂತಹವರೂ ಸಾವಿಗೆ ಊಟವಾಗಿದ್ದಾರೆ . ಬದುಕುತನ್ನ ರಹಸ್ಯವನ್ನು ಯಾರಿಗೂ ಬಿಟ್ಟುಕೊಟ್ಟಿಲ್ಲ. ಆದರೂ ಈನಿಗೂಢ ಜಗತಿನಲ್ಲಿ ಕೆಲವು ಸತ್ಯಗಳು ದರ್ಶನವಾಗುತ್ತವೆ. ಹುಟ್ಟು-ಸಾವು ಆದಿಯೂ ಅಲ್ಲ. ಅಂತ್ಯವೂ ಅಲ್ಲ. ಇದು ನಿರಂತರ ಗತಿಚಕ್ರ.ವಿಷಾದವುಂಟಾದರೂ ಇದ್ದಂತೆಜೀವನ ಸ್ವೀಕರಿಸದೆ ಬೇರೆ ದಾರಿ ಇಲ್ಲ ಬಂಧನಗೊಳಿಸುವ ಕೈಕೋಳ ರತ್ನದ್ದಾದರೇನು?
ಬಂಧನ ಬಂಧನವೆ . ಕೈಗೆ ರತ್ನದ ಕೋಳವಿದೆ ಎಂದು ಸಂತೋಷಿಸಲು ಬರುವುದಿಲ್ಲ.ಬಲೆಯು ದಾರದ್ದಾದರೇನು?ಮುತ್ತಿನದ್ದಾದರೇನು? ಬಲೆ ಬಲೆಯೆ?ಖಡ್ಗವು ಹೊಡೆದರೆ ಚಿನ್ನದ್ದಾದರೂಸಾವೆ? ಕಬ್ಬಿಣದ್ದಾದರೂ ಸಾವೆ? ಮನುಷ್ಯನು ಎಷ್ಟೇ ಪೂಜೆ.ಭಕ್ತಿ ಪ್ರಾರ್ಥನೆ, ಧ್ಯಾನ ಏನೆಲ್ಲ ನಡೆಸಿದರೂ ಸಾವು ಮಾತ್ರ ಯಾರನ್ನೂ ಬಿಡುವುದಿಲ್ಲ. ಹುಟ್ಟು

ಸಾವುಗಳು ಲೋಕಸತ್ಯಗಳು. ಹುಟ್ಟಿದ ಎಲ್ಲರಿಗೂ ಮರಣ.
ಮರಣಿಸಿದ ಎಲ್ಲರಿಗೂ ಹುಟ್ಟು ಇದು ಸೃಷ್ಟಿ.

1)ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ.
ಎನಗುಳ್ಳುದೊಂದು ಮನ.
ಆ ಮನ ನಿಮ್ಮಲ್ಲಿ  ಸಿಲುಕಿದ ಬಳಿಕ ಎನಗೆ ಭವವುಂಟೆ
ಚೆನ್ನಮಲ್ಲಿಕಾರ್ಜುನ '.

## ಪದಗಳ ಅರ್ಥ

ಲೋಕದ ಚೇಷ್ಟೆ-ಲೋಕದ ಸೃಷ್ಟಿ, ಕ್ರಿಯೆ,
ಬೀಜ-ಮೂಲ, ಕಾರಣ
ಕರಣ-ಇಂದ್ರಿ ಯಗಳು,ಕಿವಿ,ಚರ್ಮ,ಕಣ್ಣು ನಾಲಿಗೆ,ಮೂಗು,,
ಚೇಷ್ಟೆ-ಕೀಟಲೆ,ಕ್ರಿಯಾಗುಣ,
ಉಳ್ಳುದು-ಇರುವುದು.

## ವಚನದ ಅರ್ಥ

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಕರಣಂಗಳ ಚೇಷ್ಟೆಗೆ ಮನವೆ ಬೀಜ. ಲೋಕದ ಕ್ರಿಯೆಗಳಿಗೆ ಸೂರ್ಯನೆ ಮೂಲವಾದಂತೆ ಇಂದ್ರಿಯಗಳ ಕ್ರಿಯಾ ಪಟುತ್ವಕ್ಕೆ ಮನಸ್ಸೇ ಮೂಲ. ಉಳ್ಳುದೊಂದು ತನು ಉಳ್ಳುದೊಂದು ಮನ ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ ಎನಗನ್ಯ ವಿಚಾರವುಂಟೆ?ನನಗಿರುವುದು ಒಂದೆ ಮನಸ್ಸು, ಒಂದೆ ಶರೀರ. ಆ ಮನಸ್ಸು ಮತ್ತು ತನುವನ್ನು ನಿಮಗೆ ಒಪ್ಪಿಸಿಕೊಂಡಿ ದ್ದೇನೆ. ಎಂದ ಮೇಲೆ ನನಗೆ ಇತರ ವಿಚಾರಗಳಿಲ್ಲ. ತಪಸ್ಸಿಗೆ ಬಂದಮೇಲೆ ಅಕ್ಕ ಮಹಾದೇವಿಯವರು ಜೀವನವನ್ನು ವಾಸ್ತವ ದೃಷ್ಟಿಯಿಂದ ನೋಡುವುದು ಅನಿವಾರ್ಯವಾಯಿತು. ಜೀವ, ಜಗತ್ತು ಮನುಷ್ಯ, ಸೃಷ್ಟಿ ಇವೆಲ್ಲ ಯಾಕೆ?ನಮಗೆ ಈತರಲೆ ತಾಪತ್ರಯಗಳೆಲ್ಲ ಯಾಕೆ?ವಸ್ತುನಿಷ್ಠ ಚಿಂತನೆ ನಡೆಸಿದ್ದಾರೆ. ಈಜೀವಜಾಲಕೆ ಸೂರ್ಯನೆ ಕಾರಣ. ಮನುಷ್ಯನ ಉನ್ನತಿ ಅವನತಿಗಳಿಗೆ ಮನಸ್ಸು ಕಾರಣ. ಉಳ್ಳು ದೊಂದು ತನು ಉಳ್ಳುದೊಂದು ಮನ. ನನಗೆ ಇರುವುದು ಒಂದೆ ದೇಹ ಒಂದೆ ಮನಸ್ಸು. ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ, ಆ ಮನಸ್ಸು

ನಿಮ್ಮಲ್ಲಿ ಒಂದಾದ ಮೇಲೆ ನನಗೆ ಬೇರೆ ವಿಚಾರಗಳಿಲ್ಲ.ನನ್ನ ದೇಹವನ್ನು ನಿನ್ನ ಪೂಜೆಗೆ ಮೀಸಲಿರಿಸಿ ದ್ದೇನೆ. ನನ್ನ ಮನಸ್ಸನ್ನು ನಿನ್ನಲ್ಲಿ ಒಪ್ಪಿಸಿದ್ದೇನೆ. ಸೂರ್ಯ ಹೇಗೆ ಸೃಷ್ಟಿಗೆ ಬೀಜವೊ ಹಾಗೆ ಮನುಷ್ಯನ ಮತ್ತೆ ಮತ್ತೆ ಹುಟ್ಟಿಗೆ ಈಮನಸ್ಸು ಬೀಜವಾಗಿದೆ. ಈಮನಸ್ಸನ್ನು ನಾವು ನಿಯಂತ್ರಿಸಬೇಕಾದ ಅಗತ್ಯವನ್ನು ಈವಚನದಲ್ಲಿ ಹೇಳಿದ್ದಾರೆ. ರಾಜ ಕೌಶಿಕ, ನನ್ನ ವಿಚಾರದಲ್ಲಿ ಮನಸ್ಸು ನಿಯಂತ್ರಿಸಿದ್ದರೆ ನನಗೆ ಈಪರಿಭವವೆ ಬರುತ್ತಿರಲಿಲ್ಲ. ಇದು ತಿಳಿದ ವಿಚಾರ . ಆದರೆ ಆ ತೊಂದರೆ ಅವರಿಗೆ ಒದಗಿದುದರಿಂದಲೆ ಅಕ್ಕಮಹಾದೇವಿಯವರು ನಾನತರ ಕಷ್ಟ, ಕಣ್ಣೀರು , ಪಡಬೇಕಾಯಿತು,
ಕೌಶಿಕ ರಾಜನ , ಕಣ್ಣಿಗೆ ಸಿಗದಿದ್ದರೆ ಅಕ್ಕಮಹಾನ್ ಯೋಗಿಯಾಗಿ, ಜನರ ಸೇವೆಯಲ್ಲಿ,
ಸಂತೋಷ ದಿಂದ ತುಂಬ ವರ್ಷಗಳ ಕಾಲ ಬಾಳುತ್ತಿದ್ದರು,

2). ಲಿಂಗಕ್ಕೆ ಶರಣೆಂದು ಪೂಜಿಸಿ ಅರ್ಪಿಸಬಹುದಲ್ಲದೆ ಜಂಗಮವ ಪೂಜಿಸಿ ಸರ್ವಸುಖವನರ್ಪಿಸಿಶರಣೆನ್ನಬಾರದು. ಎಲೆ ತಂದೆ ಆಡಬಹುದು ಪಾಡಬಹುದಲ್ಲದೆ ನುಡಿದಂತೆ ನಡೆಯಲುಬಾರದು. ಎಲೆತಂದೆ ಚೆನ್ನಮಲ್ಲಿಕಾರ್ಜುನ ನಿಮ್ಮ ಶರಣರು ನುಡಿದಂತೆ ನಡೆಯಲು ಬಲ್ಲರು.ಎಲೆ ತಂದೆ.

ವಚನದ ಅರ್ಥ

ಲಿಂಗಕ್ಕೆ ಶರಣೆಂದು ಪೂಜಿಸಿ ಅರ್ಪಿಸಬಹುದಲ್ಲದೆ ಜಂಗಮವಪೂಜಿಸಿ ಸರ್ವಸುಖ ವನರ್ಪಿಸಿ ಶರಣೆನ್ನಬಾರದು. ಲಿಂಗಭಕ್ತಿ ಮಾಡುವುದು ಸುಲಭ. ಆದರೆ ಜಂಗಮ ಭಕ್ತಿ ಮಾಡುವುದು ಕಠಿನ. ಲಿಂಗಕ್ಕೆ ನೀರೆರೆದು, ಭಸ್ಮ ಧರಿಸಿ,ಹೂ ತಂದು ಏರಿಸಿ ಭಕ್ತಿಮಾಡುವುದು ಸುಲಭ. ಆದರೆ ಜಂಗಮಕ್ಕೆ ಪ್ರಸಾದ ಇತರೆ ಪೂಜಾವ್ಯವಸ್ಥೆಮಾಡುವುದು ಕಠಿನ. ಲೋಕದಲ್ಲಿ ಇಂತಹ ಭಕ್ತರು ಕಡಿಮೆ. ಎಲೆ ತಂದೆ ಆಡಬಹುಮ ಪಾಡಬಹುದಲ್ಲದೆ ನುಡಿದಂತೆ ನಡೆಯಲು ಬಾರದು. ಬೇಕಾದ ಹಾಗೆ ಇಷ್ಟುದ್ದ ಮಾತನಾಡಬಹುದು. ಆದರೆ ಮಾತಿನಂತೆ ನಡೆದುಕೊಳ್ಳುವವರುದುರ್ಲಭ. ಎಲೆ ತಂದೆ ಚೆನ್ನಮಲ್ಲಿಕಾರ್ಜುನದೇವಾ, ನಿಮ್ಮ ಶರಣರು ನುಡಿದಂತೆ ನಡೆಯಲು ಬಲ್ಲರು. ಆದರೆ ಪರಮಾತ್ಮನೆ ಶರಣರು ಮಾತ್ರ ನುಡಿದಂತೆ ನಡೆದುಕೊಳ್ಳುತ್ತಾರೆ. ಧರ್ಮದ ಅನು ಯಾಯಿಗಳು,

ಮತ್ತು ತತ್ವನಿಷ್ಠ ಅನುಯಾಯಿಗಳು ಎಂದು ಎರಡುವಿಧ ಇದ್ದಾರೆ . ಸುಮ್ಮನೆ ಧಾರ್ಮಿಕ ಜೀವನ ನಡೆಸುವವರು ಮಾತನಾಡುತ್ತಾರೆ, ಮಾತಿನಂತೆ ನಡೆ ಯುವುದಿಲ್ಲ. ಶರಣರು ಮಾತ್ರ ನುಡಿದಂತೆ ನಡೆದುಕೊಳ್ಳುತ್ತಾರೆ.ವಚನ ತುಂಬ ಸರಳವಾಗಿದೆ. ಆಚರಿಸಲು ಅಷ್ಟೇ ಕಠಿಣವಾಗಿದೆ. ಸಾಮಾನ್ಯವಾಗಿ ಎಲ್ಲರೂ ಲಿಂಗ ಭಕ್ತಿ ಮಾಡುತ್ತಾರೆ. ಲಿಂಗಭಕ್ತಿ ಮಾಡುವಾಗ ಎಲ್ಲವೂ ಭಕ್ತಿಯಿಂದ ನಡೆಯುತ್ತದೆ. ಈಭಕ್ತಿಯನ್ನು ಲಿಂಗ ಸ್ವೀಕರಿಸುವುದೆ? ಇಲ್ಲ. ಅದೆ ಜಂಗಮಭಕ್ತಿ ಮಾತ್ರ ಸಾಧ್ಯ ವಿಲ್ಲ. ಈಜಂಗಮಭಕ್ತಿ ಮಾಡುವವರು ಶರಣರು ಮಾತ್ರ. ಬಹಳ ಮಾತನಾಡಬ ಹುದು. ಆದರೆ ಆಡಿದಂತೆ ನಡೆಯುವುದು ಶರಣರು ಮಾತ್ರ. ಜಂಗಮವು ಭಕ್ತಿಯನ್ನು ಸ್ವೀಕರಿಸುತ್ತದೆ. ಅರ್ಪಣೆಯ, ಶರಣಾಗತಿಯ ಭಕ್ತಿ ಮಾಡುವುದು ಕಠಿನ. ಈಗ ಅಕ್ಕನವರು ಕೂಡ ಜಗದ ಜಂಗಮರಾಗಿ ವಚನೋಪದೇಶವನ್ನು ನೀಡುತ್ತ ಲೋಕಸಂಚಾರದಲ್ಲಿದ್ದಾರೆ. ಇಂತಹ ಅರಿವಿನ ಜಂಗಮವನ್ನು ಲೋಕ ಹೇಗೆ ಸ್ವೀಕ ರಿಸುತ್ತದೆ ಎಂಬುದು

ಅವರ ಅನುಭವಕ್ಕೆ ಬರುತ್ತಿದೆ.

3)ಲಿಂಗಕ್ಕೆ ರೂಪ ಸಲಿಸುವೆ. ಜಂಗಮಕ್ಕೆ ರುಚಿಯ ಸಲಿಸುವೆ. ಕಾಯಕ್ಕೆ ಶುದ್ದ ಪ್ರಸಾದವ ಕೊಂಬೆ. ಪ್ರಾಣಕ್ಕೆ ಸಿದ್ದಪ್ರಸಾದವ ಕೊಂಬೆ. ನಿಮ್ಮ ಪ್ರಸಾದದಿಂದ ದನ್ಯಳಾದೆನು ಕಾಣಾ ಚೆನ್ನಮಲ್ಲಿಕಾರ್ಜುನಯ್ಯ.

## ವಚನದ ಅರ್ಥ

ಲಿಂಗಕ್ಕೆ ರೂಪ ಸಲಿಸುವೆ. ಜಂಗಮಕ್ಕೆ ರುಚಿಯ ಸಲಿಸುವೆ. ದೇವನು ಆಕಾರ, ನಿರಾಕಾರ ಆದುದರಿಂದ ಅವನಿಗೆ ರೂಪು ಸಲಿಸುವೆ. ಪ್ರಸಾದವು ಐದು ಗುಣಗಳನ್ನು ಪಡೆದಿರುತ್ತದೆ. ಇಲ್ಲಿ ಲಿಂಗದೇವರಿಗೆ ರೂಪದ ಅರ್ಪಣೆ. ಜಂಗಮಕ್ಕೆ ರುಚಿಯ ಸಲಿಸುವೆ . ಜಂಗಮನು ಮನುಷ್ಯ ರೂಪಿ. ಇಲ್ಲಿ ದೇಹವಿದೆ. ಇದಕ್ಕೆ ಪ್ರಸಾದ ಸ್ವೀಕಾರ ವಾಗುವುದರಿಂದ ಇಲ್ಲಿ ರುಚಿಯನ್ನು ಅರ್ಪಣೆ ಮಾಡುತ್ತೇನೆ. ಅಡಿಗೆ ಇಲ್ಲಿ ನೈವೇದ್ಯವಾಗಿ ಸ್ವೀಕಾರವಾಗುತ್ತದೆ. ಕಾಯಕ್ಕೆ ಶುದ್ದ ಪ್ರಸಾದವ ಕೊಂಬೆ. ಪ್ರಾಣಕ್ಕೆ ಸಿದ್ದಪ್ರಸಾದವ ಕೊಂಬೆ . ಈ ಶರೀರವು ಬದುಕಲು ಅನ್ನ ಪ್ರಸಾದ ಬೇಕು. ಆದುದರಿಂದ ಮೊದಲು ಇದನ್ನು ಲಿಂಗ ಜಂಗಮಕ್ಕಿತ್ತು ಸ್ವೀಕಾರ ಮಾಡುತ್ತೇನೆ. ಪ್ರಾಣನು

ಅನು ಗ್ರಹ ರೂಪದಲ್ಲಿ ಪ್ರಸಾದವನ್ನು ಪಡೆಯುವುದರಿಂದ ಸಿದ್ಧಪ್ರಸಾದವನ್ನು ಸ್ವೀಕರಿ ಸುವೆನು. ನಿಮ್ಮ ಪ್ರಸಾದದಿಂದ ಧನ್ಯಳಾದೆನು ಕಾಣಾ ಚೆನ್ನಮಲ್ಲಿಕಾರ್ಜುನಾ. ನಾನು ಈ ಎಲ್ಲ ಅನುಗ್ರಹ ಪ್ರಸಾದದಿಂದ ಧನ್ಯಳಾದೆ. ನೈವೇದ್ಯವು ಎಡೆಯಾಗುವ ರೀತಿ ಮತ್ತು ಈ ನೈವೇದ್ಯ ಪ್ರಸಾದವಾಗಿ ಸೀಕಾರವಾಗುವುದನ್ನು ಇಲ್ಲಿ ವಿವರಿಸಲಾಗಿದೆ. ಪ್ರಸಾದವು ನಾಲ್ಕು ರೀತಿಯ ಗುಣವಿಶೇಷಣ ಹೊಂದಿರುತ್ತದೆ. ರೂಪ,ರುಚಿ,ಪರಿ ಮಳ,ಸ್ಪರ್ಶ. ದೇವರಿಗೆ ಎಡೆ ನೀಡುವಾಗ ರೂಪನೈವೇದ್ಯವಾಗುತ್ತದೆ. ಜಂಗಮಕ್ಕೆ ಎಡೆ ನೀಡಿದಾಗ ರೂಪ, ರುಚಿ, ಸ್ಪರ್ಶ, ಪರಿಮಳ ನೈವೇದ್ಯವಾಗುತ್ತದೆ. ಲಿಂಗಜಂಗಮಕ್ಕೆ ಎಡೆ ನೀಡಿ ನಾವು ಸ್ವೀಕರಿಸಿದಾಗ, ಈ ನೈವೇದ್ಯವು ಪ್ರಸಾದವಾಗುತ್ತದೆ. ನಮ್ಮ ಕಾಯವು ಪ್ರಸಾದ ಸ್ವೀಕರಿಸಿದಾಗ ಪ್ರಾಣಕ್ಕೆ ತೃಪ್ತಿಯ ಪ್ರಸಾದ ನೈವೇದ್ಯವಾಗು ತದೆ. ಈ ಪ್ರಸಾದದಿಂದ ಕಾಯವು ರಕ್ಷಣೆ,ಪೋಷಣೆ, ಪುಷ್ಟಿ ಪಡೆದು ಧನ್ಯವಾಗು ತದೆ.ಪಂಚ ವಿಷಯಗಳನ್ನು ಪ್ರಸಾದವಾಗಿ ಸ್ವೀಕರಿಸುವ ಆಚರಣೆ ಇದು.

4)ಲಿಂಗಾಂಗ ಸಂಗ ಸಮರಸ ಸುಖದಲ್ಲಿ ಮನವೇದ್ಯವಾಯಿತ್ತು ನಿಮ್ಮಶರಣರ ಅನುಭಾವಸಂಗದಿಂದ ಎನ್ನ ತನುಮನ ಪ್ರಾಣ ಗುರುಲಿಂಗ ಜಂಗಮಕ್ಕಿತ್ತುಶುದ್ಧಸಿದ್ಧಪ್ರಸಿದ್ಧಪ್ರಸಾದಿಯಾದೆನು. ಆ ಮಹಾಪ್ರಸಾದದ ರೂಪುರುಚಿತೃಪ್ತಿಯಿಷ್ಟ ಪ್ರಾಣಭಾವಲಿಂಗ ದಲ್ಲಿ ಸಾವಧಾನದಿಂದರ್ಪಿಸಿಮಹಾಘನಪ್ರಸಾದಿಯಾದೆನು. ಇಂತೀ ಸರ್ವಾಚಾರ ಸಂಪತ್ತು ಎನ್ನತನುಮನವೇದ್ಯವಾಯಿತ್ತು. ಇನ್ನೆಲ್ಲಿ ಎನಗೆ ನಿರವಯವು? ಪರಮಸುಖ, ಪರಿಣಾಮ, ಮನ ಮೇರೆದಪ್ಪಿ ನಾನು ನಿಜವನ್ನೆದುವ ಠಾವ ಹೇಳಾ ಚೆನ್ನಮಲ್ಲಿಕಾರ್ಜುನಾ.

ವಚನದ ಅರ್ಥ

ಇದು ಅಕ್ಕನವರು ಬರೆದ ವಚನವೊ? ಶೂನ್ಯಸಂಪಾದನಾಕಾರರು ಸೃಷ್ಟಿಸಿದ ವಚನವೊ? ಪ್ರಶ್ನೆ, ನಿಜವನ್ನೆದುವ ಠಾವ ಹೇಳಾ ಎಂದು ಬಹಿರಂಗದಲ್ಲಿ ಕೇಳುವುದು ಅಷ್ಟು ಸಹಜವಾಗಿ ಕಾಣುವುದಿಲ್ಲ. ಚೆನ್ನಮಲ್ಲಿಕಾರ್ಜುನನನ್ನು ಪತಿಯನ್ನಾಗಿ ಪಡೆ ಯಬೇಕೆಂಬ ಇಚ್ಛಾಶಕ್ತಿ, ಶ್ರೀಶೈಲ ನೋಡಬೇಕೆಂಬ ಇಚ್ಛಾ ಅಕ್ಕನವರಲ್ಲಿ ಪ್ರಬಲವಾಗಿತ್ತು. ಆದರೆ ಈಗ ಶರಣರಿಗೆ ದೇವರು ಪರಿಕಲ್ಪನೆ ಸ್ಪಷ್ಟವಾಗಿದೆ. ದೇವಾಲಯಗಳಿಗೆ ನಡೆದುಕೊಳ್ಳುವುದು ಶರಣತತ್ವಕ್ಕೆ ವಿರುದ್ಧವಾಗಿದೆ. ಯಾವುದೆ, ಸ್ಥಾನಕ್ಕಿಂತ

ಶರಣರು ಮನುಷ್ಯನ ವ್ಯಕ್ತಿತ್ವಕ್ಕೆ ಹೆಚ್ಚು ಮನ್ನಣೆ ನೀಡಿದರು.
ಅನಿರೀಕ್ಷಿತವಾಗಿ ಆಘಾತಕಾರಿಯಾದರೀತಿಯಲ್ಲಿ ಅಕ್ಕನವರು
ತಮ್ಮಹುಟ್ಟೂರಾದ ಉಡುತಡಿಯಿಂದ ತೊರೆದುಹೊರಟರು.
ಎಲ್ಲಿಗೆ ಹೋಗುವುದು? ತಮ್ಮ ಆಗಾದ ದೈವವಾದ
ಚೆನ್ನಮಲ್ಲಿಕಾರ್ಜುನನಸ್ಥಳ ಶ್ರೀಶೈಲಕ್ಕೆ ಹೊರಡುವುದು
ಅನಿವಾರವಾಯಿತು ಆದರೆ ಹೋಗುವ ದಾರಿ ತಿಳಿಯದು.
ಮನೆಬಿಟ್ಟು ಹೊರಗೆ ಹೋಗಿರದ ಅಕ್ಕಮಹಾದೇವಿಯವರು ಎತ್ತ
ಹೋಗುವುದು ?ತಮ್ಮ ಊರಿನದಾರಿ ಯಾವದಿಕ್ಕಿಗೆ ಹೊರಳುವುದು
ಆ ದಿಕ್ಕಿಗೆ ಹೊರಳಿದರು.
ಶ್ರೀಶೈಲ ಹೋಗುವದಾರಿಗೆ. ಮೊದಲು ಕಲ್ಯಾಣಕ್ಕೆ. ಬಂದರು
ಮಹಾದೇವಿಯವರು,
ಅಲ್ಲಮಪ್ರಭುವಿನಿಂದ ಸಲಹೆ ಪಡೆದು
ಶ್ರಿ ಶೈಲದ ಗುಹೆಯಲ್ಲಿ ತಪಸ್ಸಿಗೆ ಕುಳಿತರು.
ತಪಸ್ಸಿನಿಂದ ದೇವರ ಬಗೆ ಗಿದ್ದ ಪರಿಕಲ್ಪನೆಗಳೆಲ್ಲ ಕರ್ಪೂರದಂತೆ
ಉರಿದುಹೋದವು. ಇನ್ನುಳಿದ ಜೀವನವೆಲ್ಲ
ಶಿವಶರಣೆಯಾಗಿ,ಗುರುವಾಗಿ ಜ್ಞಾನೋಪದೇಶ ನೀಡುತ್ತ
ಲೋಕಹಿತದಲ್ಲಿ ದಿನ ಕಳೆಯುವುದು ಅವರಜೀವನವಾಯಿತು.
ಶರಣರು, ಮಹಾತ್ಮರು ಇವರೊಂದಿಗೆ ಅರಿವು, ಅನುಭಾವದ
ಸಂಭಾಷಣೆ ಮಾಡುತ್ತ ದಿನ ಕಳೆಯತೊಡಗಿದರು.
ಅಕ್ಕಮಹಾದೇವಿಯವರು ಇರುವ ಸ್ಥಳಕ್ಕೆ ಶರಣರು ಬರುತ್ತಿದ್ದರು
ಸಂದರ್ಶನ ಮಾಡುತ್ತ ಮುಂದುವರಿದರು. (ಹಾಗೆ ಶರಣರು, ಸಿದ್ಧರು,
ಯೋಗಿಗಳು,ಅಘೋರಿಗಳು ಆ ಕಾಲದಲ್ಲಿ ಶ್ರೀಶೈಲದಲ್ಲಿ ಇದ್ದರು)
ಶ್ರೀ ಶೈಲ ನೋಡುವ ಅಕ್ಕನವರ ಗುರಿಯಾಯಿತು.
ಈಕಲ್ಯಾಣದಲ್ಲಿ ಮುಂದೆ ನಾನು ಪರಿಣಾಮ ಹೊಂದಬೇಕು ಎಂದು
ಪ್ರಭುದೇವರನ್ನು ಕೇಳಿದರು. ಎಂದು ಈವಚನ ಸೂಚಿಸುತ್ತದೆ.

ಲಿಂಗಪೂಜೆ, ಲಿಂಗಭಕ್ತಿನಂತರ ಶಿವಾನುಭಾವ ಅವರಿಗೆ ತುಸು
ನೆಮ್ಮದಿ ಶಾಂತಿ ನೀಡಿದವು. ಮನಸ್ಸಿಗೆ ಅನುಭೂತಿ
ತಂದುಕೊಟ್ಟಿತು. ತನುಮನಪ್ರಾಣವನ್ನು ಗುರುಲಿಂಗಜಂಗಮಕ್ಕೆ
ಎಡೆಮಾಡಿದೆ. ಇದರಿಂದ ತನುಮನಪ್ರಾಣಗಳು ಶುದ್ಧವಾ ದವು.
ಪ್ರಸಾದವಾದವು. ತನು ಗುರುಗಳ, ಮಹಾತ್ಮರ ,ಶರಣೆಯರ
ಪೂಜಾವ್ಯವ ಸ್ಥೆ ಸೇವೆಯಲ್ಲಿ ಶುದ್ಧವಾಯಿತು.ಮನಸ್ಸು
ಪರಮಾತ್ಮನಲ್ಲಿ ಲಯವಾಗಿ ಶುದ್ಧವಾ ಯಿತು. ಈಗ ಅಕ್ಕನವರೇ
ಜಂಗಮವಾಗಿ ಲೋಕಗುರುವಾಗಿದ್ದಾರೆ. ಪ್ರಾಣ ಪರಮಾತ್ಮನಿಗೆ
ಮೀಸಲಾಯಿತು. ಪ್ರಾಣವೂ ಎಡೆಯಾಯಿತು. ಪ್ರಾಣವನ್ನೆ ಈಗ
ಸಮಾ ಜಕ್ಕೆ ಧರ್ಮಕ್ಕೆ ಮುಡುಪಾಗಿಟ್ಟರು. ಇದರಿಂದ ಪ್ರಸಿದ್ಧ
ಪ್ರಸಾದಿಯಾದರು. ಜ್ಞಾನೋಪದೇಶದ 'ಕಾಯಕ ದಿಂದ ಬಂದ

ಪ್ರಸಾದ ಸ್ವೀಕರಿಸಿ ಮಹಾಪ್ರಸಾದಿ ಯಾದರು. ಈ ಪ್ರಸಾದ ಸ್ವೀಕರಿಸುವಾಗ ರೂಪ, ರುಚಿ, ತೃಪ್ತಿಯನ್ನು ಇಷ್ಟಲಿಂಗಕ್ಕೂ ಪ್ರಾಣಲಿಂಗಕ್ಕೂ ಭಾವಲಿಂಗಕ್ಕೂ ಸಾವಧಾನದಿಂದ ಸಮರ್ಪಿಸಿದ ಕಾರಣ ಮಹಾ ಪ್ರಸಾದಿಯಾದರು. ತನುಮನಪ್ರಾಣ ಶುದ್ದವಾದುದರಿಂದ ಸರ್ವಾಚಾರ ಸಂಪತ್ತು ತನುಮನಪ್ರಾಣಗಳಿಗೆ ನೆಲೆಯಾಯಿತು.ಇಂತಹ ಮಹಾಘನಪ್ರಸಾದದಿಂದ ಜೀವನ ಸಾರ್ಥಕವಾದಮೇಲೆ ಎಲ್ಲಿ ನಿರವಯ ಹೊಂದುವುದು?ಪರಮಸುಖ ಪರಿಣಾ ಮವು ಮನಮೇರೆದಪ್ಪಿ ಪಡೆಯುವುದೆಂತು? ನಾನು ನಿಜವನ್ನು ಹೊಂದುವ ಸ್ಥಳ ವಾವುದು? ಅಕ್ಕನವರು ಪ್ರಭುದೇವರನ್ನು ಕೇಳಿದ್ದಾರೆ.
ಕಾರಣ ಬಸವಣ್ಣನವರ
ಕಾಯಕವೂ ಅಭದ್ರ, ಶರಣರ ಕಲ್ಯಾಣದ ಜೀವನವೂ ಅಭದ್ರ. ಈರಾಜಕೀಯದ ಒಳಸುಳಿಗಳು ಎಂತಹವು ಎಂದು ಅಕ್ಕನವರಿಗೆ ಮೊದಲೆ ಚೆನ್ನಾಗಿ ಅನುಭವವಾ ಗಿದೆ .

ಋಷಿಗಳು,ಮಹಾತ್ಮರು,ಸಂತರು ಆಶ್ರಮವಾಸಿಗಳಾಗಿ ಶಾಂತಜೀವನ ನಡೆ ಸಿದ್ದಾರೆ. ಇಂತಹ ಒಂದು ಸ್ಥಳದ ಆಯ್ಕೆಗೆ ಪ್ರಭುದೇವರಲ್ಲಿ ವಿಚಾರಿಸಿದ್ದು ಸಹಜವೇ ಆಗಿದೆ.
ಲೋಕಸಂಚರಿಸಿರುವ ಜ್ಞಾನಿ ಪ್ರಭದೇವರು ಸೂಕ್ತ ಸ್ಥಳ,ಮತ್ತುವ್ಯವಸ್ಥೆಯನ್ನು ಸೂಚಿಸಿದ್ದಾರೆ.ಶ್ರೀಶೈಲದ ಕದಳೀವನ ಅವರ ಶಾಂತಯೋಗದ ಜ್ಞಾನಜೀವನಕ್ಕೆ ಒಂದು ಪ್ರಶಾಂತ ಸ್ಥಳ.

6)ಲಿಂಗಸುಖಸಂಗದಲ್ಲಿ ಮನ ವೇದ್ಯವಾಯಿತ್ತು. ಇನ್ನೆಲ್ಲಿ ಅಯ್ಯ ಎನಗೆ ನಿಮ್ಮಲ್ಲಿ ನಿರವಯವವು.
ಪರಮಸುಖ ಪರಿಣಾಮ ಮೇರೆದಪ್ಪಿ ನಾನು ನಿಜವನ್ನೈದುವ ಠಾವಹೇಳಾ ಚೆನ್ನಮಲ್ಲಿಕಾರ್ಜುನ ಪ್ರಭುವೆ.

## ಪದಗಳ ಅರ್ಥ

ವೇದ್ಯ-ತಿಳಿ.
ನಿರವಯ-ಬಯಲಾಗುವುದು.
ನಿಜ-ಮೋಕ್ಷ .
ಠಾವು-ಸ್ಥಳ

ಪರಿಣಾಮ-ಐಕ್ಯ.
ಸಂಗ-ಪೂಜಾನಂದ .

## ವಚನದ ಅರ್ಥ

ಲಿಂಗ ಸುಖ ಸಂಗದಲ್ಲಿ ಮನ ವೇದ್ಯವಾಯಿತ್ತು. ಇನ್ನೆಲ್ಲಿ ಅಯ್ಯಾ ಎನಗೆ ನಿರವಯವವು? ಲಿಂಗಪೂಜಾನಂದದಲ್ಲಿ ಮನಸ್ಸು ಶಾಂತಿ ಪಡೆಯಿತು. ನಾನುಇನ್ನು ಎಲ್ಲಿ ಬಯಲಾಗಲಿ? ದೇಹದ ಹಂಗನ್ನು ಎಲ್ಲಿ ಬಿಡುಗಡೆಗೊಳಿಸಲಿ? ಪರಮಸುಖ ಪರಿಣಾಮ ಮನ ಮೇರೆದಪ್ಪಿ ನಾನು ನಿಜವನ್ನೆದುವ ಠಾವ ಹೇಳಾ ಚೆನ್ನಮಲ್ಲಿಕಾರ್ಜುನಾ. ನಾನು ಅತಿಶಯವಾದ ಪರಮಾನಂದ ಪ್ರಾಪ್ತಿ ಮಾಡಿಕೊಂಡು ಪರಿಣಾಮಿಸುವುದು ಎಲ್ಲಿ?ಮನಸ್ಸು ಪರಮಸುಖವನ್ನು ಹೊಂದಿ ಮುಕ್ತಾತ್ಮನಾಗುವ ಸ್ಥಳವನ್ನು ತಿಳಿಸಿ ಗುರುವೆ. ಎಲ್ಲೆ ಮೀರಿದ ನಿಜಾನಂದವನ್ನು ನಾನು ಎಲ್ಲಿ ಪಡೆಯುವೆನು. ನಾನು ಎಲ್ಲಿ ಬಯಲಾಗಲಿ?
ಅಕ್ಕಮಹಾದೇವಿಯವರು ನೇರವಾಗಿ ತಮ್ಮ ನಿರ್ವಾಣಕ್ಕೆ ಮಾರ್ಗದರ್ಶನ ಕೇಳಿದ್ದಾರೆ. ಇದುವರೆಗೆ ನಡೆಸಿದ ಅನುಭಾವ ಶರಣರ ಸಂಗ ಧರ್ಮೋಪದೇಶ ಎಲ್ಲವು ಅಕ್ಕಮಹಾದೇವಿಯವರಲ್ಲಿ ಧನ್ಯತಾಭಾವವನ್ನು ತಂದುಕೊಟ್ಟವು. ದೇಹವಿಡಿದು ಏನು ಸಾಧಿಸಬೇಕಿತ್ತೋ ಅದನ್ನು ಸಾಧಿಸಿದ್ದಾಯಿತು. ಇನ್ನು ದೇಹವಿಡಿದು ಬದುಕುವುದು ತೊಡಕಿನದು ಎನಿಸಿರಬೇಕು. ಈ ದೇಹವನ್ನು ಇನ್ನು ವಿಸರ್ಜಿಸ ಬೇಕೆಂದು ಅವರಿಗೆ ಭಾವನೆಯಾಯಿತು. ಕೂಡಲೆ ಪ್ರಭುದೇವ ರನ್ನು ಈ ವಿಚಾರದಲ್ಲಿ ಮಾರ್ಗದರ್ಶನ ಮಾಡುವಂತೆ ಕೇಳಿದ್ದಾರೆ. ಮನುಷ್ಯನಿಗೆ ಎಲ್ಲಿ ಮಾಯೆ ಹಿಡಿಯುತ್ತದೆ ಅಲ್ಲಿಯವರೆಗೆ ಮನುಷ್ಯ ದೇಹವಿಡಿದು ಬರಲು ಇರಲು ಇಷ್ಟಪಡುತ್ತಾನೆ. ಮಾಯೆ ಹೋಯಿತು ಮನುಷ್ಯ ಈಜಗತ್ತು ಸಾಕು ಎಂದು ಬಿಡುತ್ತಾನೆ. ಒಂದು ಒಳ್ಳೆಯ ಕಾರ್ ಮಾಡಬೇಕಾದರೂ ಮನುಷ್ಯ ಒಂದಿಷ್ಟಾದರೂ ಮಾಯೆಗೆ ಒಳಗಾಗುತ್ತಾನೆ. ಇದೆಲ್ಲ ನಾನು ಮಾಡುತ್ತೇನೆ. ನನ್ನಿಂದ ಆಯಿತು ಈ ಭಾವವನ್ನು ಕೂಡ ಮಾಯೆ ಯೆಂದು ಹೇಳುವುದಾದರೆ ಇಂತಹ ಮಾಯೆಯನ್ನು ಗೆಲ್ಲುವುದು ತುಂಬ ಕಠಿನವೇ ಸರಿ.
ಅಕ್ಕಮಹಾದೇವಿಯಂತಹ ಪರಿಪೂರ್ಣ ಚೇತ ನಗಳು ಚಿಕ್ಕ ವಯಸ್ಸಿನಲ್ಲಿ ಪರಿಪೂರ್ಣತೆ ಸಾಧಿಸಿಬಿಡುತ್ತರೆ. ಇಂತಹ ಚೇತನಗಳು ತಾವೆಲ್ಲಿರುತ್ತರೊ ಅಲ್ಲಿಂದಲೆ ಜಗತ್ತನ್ನು ಇಲ್ಲಿನ ಬದ್ಧಜೀವಿಗಳನ್ನು ಬುದ್ಧಜೀವಿಗಳ ನ್ನಾಗಿ ಮಾಡುತ್ತ ಉದ್ಧಾರಪಥದಲ್ಲಿ ನಡೆಸುತ್ತಿರುತ್ತಾರೆ.

7).ಲೋಕವ ಹಿಡಿದು ಲೋಕದ ಸಂಗದಂತಿಪ್ಪೆ
ಆಕಾರವಿಡಿದು ಸಾಕಾರ ಸಹಿತ ನಡೆವೆ.
ಹೊರಗೆ ಬಳಸಿ ಒಳಗೆ ಮರೆದಿಪ್ಪೆ ಬೆಂದ ನುಲಿಯಂತೆ
ಹುರಿಗುಂದದಿಪ್ಪೆ ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯ
ಹತ್ತರೊಳಗೆ ಹನ್ನೊಂದಾಗಿ ನೀರ ತಾವರೆಯಂತಿಪ್ಪೆ

ಪದಗಳ ಅರ್ಥ

ನುಲಿ-ಹಗ್ಗ
ಬಳಸಿ -ಸಾಮಾನ್ಯರಂತೆ ಇದ್ದು.

ವಚನದ ಅರ್ಥ

ಲೋಕವ ಹಿಡಿದು ಲೋಕದ ಸಂಗದಂತಿಪ್ಪೆ. ಆಕಾರವಿಡಿದು ಸಾಕಾರ ಸಹಿತ ನಡೆವೆ.ಈ ಜಗತ್ತಿನಲ್ಲಿ ಇದ್ದಮೇಲೆ ಇದರಂತೆಯೆ ಇರುತ್ತೇನೆ. ದೇಹವಿಡಿದು ದೇಹದಂತೆ ಬಾಳುತ್ತೇನೆ ಹೊರಗೆ ಬಳಸಿ ಒಳಗೆ ಮರೆದಿಪ್ಪ.ಹೊರಗೆ ಬಳಸಿ ಒಳಗೆ ಮರೆದಿಪ್ಪೆ ಬೆಂದನುಲಿಯಂತೆ ಹುರಿಗುಂದದಿಪ್ಪೆ ಹೊರಗೆ ಎಲ್ಲರಂತೆಯೆ ವ್ಯವಹರಿ ಸುತ್ತೇನೆ. ಆದರೆ ಅಂತರಂಗದಲ್ಲಿ ನನ್ನಂತೆಯೆ ಇರುತ್ತೇನೆ. ಸುಟ್ಟ ಹಗ್ಗವು ಸುಟ್ಟ ಮೇಲೆ ಕೂಡ ಹಗ್ಗದ ಆಕಾರವನ್ನು ಹಾಗೆ ಉಳಿಸಿಕೊಂಡಿರುತ್ತದೆ. ಹಾಗೆ ನನ್ನನ್ನು ಸುಟ್ಟುಕೊಂಡರೂ ದೇಹದಂತೆ ವ್ಯವಹರಿಸುತ್ತೇನೆ. ಎನ್ನ ದೇವ ಚೆನ್ನಮಲ್ಲಿಕಾರ್ಜು ನಯ್ಯ ಹತ್ತರೊಳಗೆ ಹನ್ನೊಂದಾಗಿ ನೀರ ತಾವರೆಯಂತಿಪ್ಪ . ಪರಮಾತ್ಮ ಚೆನ್ನಮಲ್ಲಿ ಕಾರ್ಜುನನೆ ಹತ್ತು ಜನರಲ್ಲಿ ಹನ್ನೊಂದನೆಯವಳಾಗಿ ನೀರಿನಲ್ಲಿರುವ ತಾವರೆಯಂತಿ ರುವೆ. ಅಕ್ಕಮಹಾದೇವಿಯವರದು ಅಪೂರ್ವವಾದ ವ್ಯಕ್ತಿತ್ವ ಹೀಗಿದ್ದರೂ ಯಾವ ವಿಶೇಷತೆಯಿಲ್ಲದೆ ಸಾಮಾನ್ಯರಲ್ಲಿ ಸಾಮಾನ್ಯರಂತೆ ಇರುತ್ತೇನೆ ಎಂದು ಹೇಳಿದ್ದಾರೆ. ಹೇಳುವುದಲ್ಲ. ಅದರಂತೆ ತೀರ ಸಾಮಾನ್ಯ ಹೆಣ್ಣುಮಗಳಂತೆ ಬದುಕು ನಡೆಸಿರು ವುದನ್ನು

ಅವರವ್ಯಕಿತ್ವದಲ್ಲಿ ಕಾಣುತ್ತೇವೆ. ಯಾವುದೆ ವಿಶೇಷ ವ್ಯವಸ್ಥೆಯನ್ನು ಅವರು ಎಲ್ಲೂ ಬಯಸದೆ ಹತ್ತರಲ್ಲಿ ಹನ್ನೊಂದಾಗಿಯೇ ನೀರತಾವರೆಯಂತೆ ಇದ್ದರು. ಅಕ್ಕ ಮಹಾದೇವಿಯಂತಹವರು ಕೇವಲ ಯುಗವಲ್ಲ ಇಡೀ ಬ್ರಹ್ಮಾಂಡವೆ ಪುನಸೃಷ್ಟಿ ಯಾದರೂ ಹುಟ್ಟುತಾರೊ ಇಲ್ಲವೋ ತಿಳಿಯದು. ಅವರದು ಬಯಲು ವ್ಯಕ್ತಿತ್ವ. ಅಕಾರವಿಡಿದು ಸಾಕಾರಸಹಿತ ನಡೆದ ಪರಿಪೂರ್ಣ ವ್ಯಕ್ತಿತ್ವ. ಎನಗೆ ಕಾಯ ಇಲ್ಲೆಂಬರು ಚೆನ್ನಮಲ್ಲಿಕಾರ್ಜುನ ಒಲಿದ ಪರಿ ಎಂತಯ್ಯ. ಅಕ್ಕನವರನ್ನು ಕುರಿತು ಸಮಕಾ ಲೀನ ಶರಣರೆ ಕಾಯವಿಲ್ಲದ ರೂಹು ಎಂದು ಅಕ್ಕನವರನ್ನು ಕರೆಯುತ್ತಿದ್ದರು.ನಾ ವೆಲ್ಲ ಕಾಯವಿಡಿದು ಕಾಯದ ನೂರಾರು ಬೇಡಿಕೆಗಳನ್ನು ಪೂರಯಿಸಿಕೊಳ್ಳುತ್ತ ಬದುಕುತ್ತೇವೆ. ನಾವೆಲ್ಲ ಹುಟ್ಟಿರುವುದೆ ಕಾಯ ಕಾರಣವಾಗಿ ರಾಗ,ಭೋಗಗಳು ನಮಗೆ ಬಹಳಪ್ರೀತಿ. ಕಟ್ಟರೆಯಾಗುವಷ್ಟು ಇವನ್ನು ಅನುಭೋಗಿಸುವಲ್ಲಿ ನಿರತರು.

8). ಲಿಂಗವನ್ನೆ ಲಿಂಗೈಕ್ಯವೆನ್ನೆ ಸಂಗವೆನ್ನೆ ನಿಸ್ಸಂಗವೆನ್ನೆ ಆಯಿತ್ತೆನೆ ಆಗದೆನ್ನೆ ನೀನೆನ್ನೆ ನಾನೆನ್ನ ಚೆನ್ನಮಲ್ಲಿಕಾರ್ಜುನನಲ್ಲಿ ಘನ ಲಿಂಗೈಕ್ಯವಾದ ಬಳಿಕ ಏನೂ ಎನ್ನೆ ಏನು ಎನ್ನೆ.

## ವಚನದ ಅರ್ಥ

ಲಿಂಗವೆನ್ನೆ ಲಿಂಗೈಕ್ಯವೆನ್ನೆ ಸಂಗವೆನ್ನೆ ನಿಸ್ಸಂಗವೆನ್ನೆ, ಆಯಿತೆನ್ನೆ ಆಗದೆನ್ನೆ ನೀನೆನ್ನೆ ನಾನೆನ್ನೆ ಲಿಂಗ ಪರಮಾತ್ಮ ಎಂದು ಹೇಳುವುದಿಲ್ಲ. ಲಿಂಗದಲ್ಲಿ ಒಂದಾದೆ ಎಂದು ಹೇಳುವುದಿಲ್ಲ. ಕೂಡಿದೆ ಎನ್ನುವುದಿಲ್ಲ. ನಿರ್ವಯಲಾದೆ ಸಂಗ ಮೀರಿದೆ ಎನ್ನುವುದಿಲ್ಲ. ಮುಗಿಯಿತು ಎನ್ನುವುದಿಲ್ಲ. ಆಗಲಿಲ್ಲ ಎನ್ನುವುದಿಲ್ಲ. ನೀನು ಎನ್ನು ವುದಿಲ್ಲ. ನಾನು ಎನ್ನುವುದಿಲ್ಲ. ಇತ್ತು ಎನ್ನುವುದು, ಇಲ್ಲ ಎನ್ನುವುದು, ಮೌನದಲ್ಲಿ ನಿರಸನವಾಗತೊಡಗಿದೆ. ಚೆನ್ನಮಲ್ಲಿಕಾರ್ಜುನನಲ್ಲಿ ಘನಲಿಂಗೈಕ್ಯವಾದ ಬಳಿಕ ಏನು ಎನ್ನೆ ಏನು ಎನ್ನೆ. ಚೆನ್ನಮಲ್ಲಿಕಾರ್ಜುನನನು ಘನ. ಅಲ್ಲಿ ಲಿಂಗ ಐಕ್ಯವಾಯಿತು. ಏನೂ ಎನ್ನುವುದು ಇಲ್ಲ. ಇರುವುದು ಇಲ್ಲ ಎನಿಸಿ ಕೊಂಡಿತು. ಕ್ರಿಯೆಯೆ ಘನವಾದ ಇರವು. ಲಿಂಗೈಕ್ಯದ ಇರವು. ಪರಮಾತ್ಮ ಎನ್ನುವುದು ಇಲ್ಲ. ಅಕ್ಕಮಹಾದೇವಿ ಎನ್ನುವುದೂ ಇಲ್ಲ. ನಾನು

ಇಲ್ಲ. ನೀನು ಇಲ್ಲ. ಉಭಯ ದಾಟಿದ ಇರವು. ಘಟ ನೀರಿನ ಕೆರೆಯಲ್ಲಿ ಇತ್ತು. ಕೊಡದ ಒಳಗು ನೀರು. ಕೊಡದ ಹೊರಗೂ ನೀರು . ಹೊರಗೂ ನೀರು. ಒಳಗೂ ನೀರು. ನೀರನ್ನು ಬೇರೆ ಮಾಡಿದ್ದು ಘಟ. ಘಟದಿಂದ ಒಳಗಿನ ನೀರು ಘಟದೊರಗಿನ ನೀರು ಎಂದು ಕರೆಸಿಕೊಂಡಿತು. ಎಲ್ಲ ನೀರೆ. ನಡುವಿನ ಘಟ ಹೋಯಿತು. ಹೊರಗಿನ ನೀರು ಒಳಗಿನ ನೀರು ಬೆರೆದು ಒಂದಾದವು. ನೀರು ನೀರ ಕೂಡಿತು. ಬಯಲು ಬಯಲು ಸೇರಿತು. ಹೊರ ಆ ಆತ್ಮ ಒಳ ಈ ಆತ್ಮ ಸೇರಿದವು. ಅಲ್ಲಿ ಈಗ ಬರಿ ಆತ್ಮ ಅದು ಬ್ರಹ್ಮದ ಆತ್ಮ.ಪರದ ಆತ್ಮ. ಅಕ್ಕಮಹಾದೇವಿಯವರು.

## , ವ, ಅಕ್ಷರದ ವಚನದ ಅರ್ಥ

1) ವರಚಕ್ರಿ ಬೆಳಗೈವಡೆ ಅಲಗಿನ ಹಂಗೇಕೆ?
ಮಾಣಿಕ್ಯದ ಬೆಳಗುಳ್ಳೊಡೆ ದೀಪದ ಹಂಗೇಕೆ?
ಪರುಷ ಕೈಯಲುಳ್ಳೊಡೆ ಸಿರಿಯ ಹಂಗೇಕೆ?
ಕಾಮಧೇನು ಕರೆವಡೆ ಕರುವಿನ ಹಂಗೇಕೆ?
ಎನ್ನ ದೇವ ಚೆನ್ನಮಲ್ಲಿಕಾರ್ಜುನಲಿಂಗವು
ಕರಸ್ಥಲದೊಳಗುಳ್ಳೊಡೆ ಇನ್ನಾವ ಹಂಗೇಕೆ?

### ಪದಗಳ ಅರ್ಥ

ವರಚಕ್ರಿ-ಚಕ್ರರತ್ನ,
ಬೆಸಗೈ-ಅಪ್ಪಣೆ ಕೇಳು,
ಅಲಗು-ಖಡ್ಗ,
ಹಂಗು-ನೆರವು,ಅಗತ್ಯ
ಮಾಣಿಕ್ಯ-ನವರತ್ನದಲ್ಲಿ ಒಂದು
ಪರುಷ-ಲೋಹವನ್ನು ಬಂಗಾರ ಮಾಡುವ ವಸ್ತು. ಕಾಮಧೇನು-ಕರುವಿನ ಅಗತ್ಯವಿಲ್ಲದೆ ಕರೆದಾಗಲೆಲ್ಲ ಹಾಲು ಕೊಡುವ ಹಸು.

### ವಚನದ ಅರ್ಥ

ವರಚಕ್ರಿ ಬೆಸಗೈವಡೆ ಅಲಗಿನ ಹಂಗೇಕೆ? ಮಾಣಿಕ್ಯದ ಬೆಳಗುಳೊಡೆ ದೀಪದ ಹಂಗೇಕೆ? ಚಕ್ರವೆ ಅಪ್ಪಣೆ ಕೇಳುತ್ತಿರುವಾಗ ಖಡ್ಗದ ಅಗತ್ಯವಿದೆಯೆ? ನವರತ್ನಮಾ ಣಿಕ್ಯದ ಬೆಳಕಿರುವಾಗ ದೀಪದ ಹಂಗೇನು?ಪರುಷಕೈಯಲುಡೆ ಸಿರಿಯ ಹಂಗೇಕೆ? ಕಾಮಧೇನು ಕರೆವಡೆ ಕರುವಿನ ಹಂಗೇಕೆ? ಲೋಹವನ್ನೆಲ್ಲ ಬಂಗಾರ ಮಾಡುವ ಪರುಷ ಕೈಲಿರುವಾಗ ಚಿನ್ನದ ಹಂಗೇನು? ಬಯಸಿದಾಗ ಕರೆ ವಕಾಮ ಧೇನು ಇರುವಾಗ ಹಸು ಸೊರ ಬಿಡಲು ಕರುವಿನ ಅಗತ್ಯವಿದೆಯೆ? ಎನ್ನದೇವ ಚೆನ್ನಮಲ್ಲಿಕಾರ್ಜುನಲಿಂಗವು ಕರಸ್ಥಲದೊಳಗುಳೊಡೆ ಇನ್ನಾವ ಹಂಗೇಕೆ ? ಜಗತ್ತನ್ನು. ಸೃಷ್ಟಿಸಿದ ಪರಮಾತ್ಮನೆ ಕರಸ್ಥಲದಲ್ಲಿರುವಾಗ ಬೇರೆ ದೈವದ ಅಗತ್ಯ ಎಲ್ಲಿದೆ.? ಚೆನ್ನ ಮಲ್ಲಿಕಾರ್ಜುನ -ಇಷ್ಟಲಿಂಗದ ಹಿರಿಮೆಯನ್ನು ಕೊಂಡಾಡುವ ವಚನ ಇದು.

ನಾಲ್ಕು ಉಪಮೆಗಳ ಮೂಲಕ ಚೆನ್ನಮಲ್ಲಿಕಾರ್ಜುನನ ಅತಿಶಯವನ್ನು ಕೊಂಡಾ ಡಲಾಗಿದೆ. 1. ಶತ್ರುಗಳನ್ನು ನಿಶ್ಶೇಷ ಮಾಡಿ ಜಯವನ್ನು ತಂದುಕೊಡುವ ಚಕ್ರರತ್ನವಿರುವಾಗ ಖಡ್ಗ ಹಿಡಿದು ಹೋರಾಡುವ ಅಗತ್ಯವೇನು? 2. ನವರತ್ನದ ಪ್ರಕಾ ಶವಿರುವಾಗ ದೀಪದ ಬೆಳಕಿನ ಅಗತ್ಯವೇನು? 3. ಮುಟ್ಟಿದ ಲೋಹವನ್ನೆಲ್ಲ ಬಂಗಾರ ಮಾಡುವ ಪರುಷವಿರುವಾಗ ನಿಧಿ,ಹಣದ ಅಗತ್ಯವಾದರೂ ಎಲ್ಲಿದೆ. ಬೇಕಾದಾಗೆಲ್ಲ ಕರೆವ ಕಾಮಧೇನುವಿರುವಾಗ ಹಸುವಿನ ಅಗತ್ಯವಾದರೂ ಎಲ್ಲಿದೆ? ಪರಮಾತ್ಮನೇ ಕರಸ್ಥಲದಲ್ಲಿರುವಾಗ ನನಗೆ ಇತರ ಭಕ್ತಿಯ ಅಗತ್ಯವಿಲ್ಲ. ಬಹುಶಃ ಅನೇರ ದೇವೋಪಾಸನೆ, ಅನ್ಯದೈವದ ಭಜನೆಯನ್ನು ಕೆಲವರು ಪ್ರತಿಪಾದಿಸಿದಾಗ ನನಗೆ ಇಷ್ಟಲಿಂಗ ಭಕ್ತಿಯೆ ಸಾಕು ಎಂದು ಅಕ್ಕನವರು ಸ್ಪಷ್ಟಪಡಿಸಿದ್ದಾರೆ.

2).ವನವೆಲ್ಲ ಕಲ್ಪತರು, ಗಿಡುವೆಲ್ಲ ಮರುಜೀವಣಿ ಶಿಲೆಗಳೆಲ್ಲ ಪರುಷ ನೆಲವೆಲ್ಲ ಅವಿಮುಕ್ತಕ್ಷೇತ್ರ ಜಲವೆಲ್ಲ ನಿರ್ಝರಾಮೃತ. ಮೃಗವೆಲ್ಲ ಪರುಷಮೃಗ ಎಡಹುವ ಹರಳೆಲ್ಲ ಚಿಂತಾಮಣಿ : ಚೆನ್ನಮಲ್ಲಿಕಾರ್ಜುನಯ್ಯನ ನಚ್ಚಿನ ಗಿರಿಯ ಸುತ್ತಿ ನೋಡುತ ಬಂದು ಕದಳಿಯ ಬನವ ಕಂಡೆ ನಾನು.

## ಪದಗಳ ಅರ್ಥ

ವನ-ವೃಕ್ಷಮರ.
ಕಲ್ಪತರು- ಕಲ್ಪವೃಕ್ಷ,
ಗಿಡು-ಮರ, ಸಸಿ.
ಮರುಜೀವಣಿ-ಜೀವಹೋದರೂ ಜೀವ ಬರಿಸುವ ಮರ.
ಶಿಲೆ-ಕಲ್ಲು .
ಪರುಷ-ಮುಟ್ಟಿದ್ದನ್ನೆಲ್ಲ ಬಂಗಾರ ಮಾಡು ವುದು. ಅವಿಮುಕ್ತಕ್ಷೇತ್ರ-ಪುಣ್ಯಕ್ಷೇತ್ರ. ನಿರ್ಝರಾಮೃತ-ಮುಪ್ಪು,ಸಾವುರೋಗ ಭಾಧಿ ಸದಂತೆ ಮಾಡುವ ಅಮೃತ.
ಮೃಗ-ಕಾಡು ಪ್ರಾಣಿ.
ಪರುಷಮೃಗ- ಜೀವದಾಯಕ ಪ್ರಾಣಿ ಗಳು. ಹರಳು-ಮರಳು, ಕಲ್ಲು.
ಚಿಂತಾಮಣಿ- ಬಯಸಿದ್ದನ್ನು ಕೊಡುವುದು. ಗಿರಿ-ಬೆಟ್ಟ.

## ವಚನದ ಅರ್ಥ

ವನವೆಲ್ಲ ಕಲ್ಪತರು, ಗಿಡುವೆಲ್ಲ ಮರು ಜೀವಣಿ ಶಿಲೆಗಳೆಲ್ಲ ಪರುಷ ಶ್ರೀಶೈಲ ಪರ್ವತದ, ಕದಳೀವನದ ಕಾಡೆಲ್ಲವೂ ಕಾಡಿನ ಮರಗಳೆಲ್ಲವು ಕಲ್ಪವೃಕ್ಷಗಳು. ಅಲ್ಲಿನ ಗಿಡ, ಸಸಿ, ಮರ, ಬಳ್ಳಿಗಳು ಜೀವ ಹೋದರೂ ಜೀವ ಬರಿಸುವ ಸಂಜೀವಿನಿ ಸಸ್ಯಗಳು. ಅಲ್ಲಿ ತುಳಿಯುವ ಕಲ್ಲು ಬಂಡೆಗಳು ಮುಟ್ಟಿದ್ದೆಲ್ಲವನ್ನು ಬಂಗಾರ ಮಾಡುವ ಪರುಷದಕಲ್ಲುಗಳು. ನೆಲವೆಲ್ಲ ಅವಿಮುಕ್ತಕ್ಷೇತ್ರ. ಜಲವೆಲ್ಲ ನಿರ್ಝರಾಮೃತ.ಮೃಗ ವೆಲ್ಲ ಪರುಷಮೃಗ. ಅಲ್ಲಿ ತಿರುಗಾಡುವ ಭೂಪ್ರದೇಶವೆಲ್ಲವೂ ಪುಣ್ಯಕ್ಷೇತ್ರ. ಆ ಸ್ಥಳಕ್ಕೆ ಹೋದರೆ ಸಾಕು ತಂತಾನೆ ಪುಣ್ಯ ಸಂಪಾದನೆಯಾಗುತ್ತದೆ. ಅಲ್ಲಿ ಹರಿಯುವ ನೀರು ನೀರಲ್ಲ. ಅದು ಮುಪ್ಪು ರೋಗ,ಸಾವು, ಅಪಮೃತ್ಯು ಎಲ್ಲವನ್ನು ಬರದಂತೆ ತಡೆಯುತ್ತದೆ. ಅದು ಅಮೃತ.ಅಲ್ಲಿನ ಪ್ರಾಣಿಗಳಾದರೋ ಅವು ಕಾಡು ಮೃಗಗಳಲ್ಲ. ಬೇಡಿದ್ದನ್ನು ನಿಡುವ ಫಲದಾಯಕ ಪ್ರಾಣಿಗಳು.ಎಡಹುವ ಹರಳೆಲ್ಲ ಚಿಂತಾಮಣಿ ಇನ್ನು ನಾವು ಅಲ್ಲಿ ತುಳಿದಾಡುವ ನಡೆದಾಡುವ ಮರಳು, ಕಲ್ಲು ನಾವು ಯಾವು ದನ್ನು ಹುಡುಕಿ ಹೋಗುತ್ತೇವಯೋ ಅದನ್ನು ಕೊಡುವ, ತೋರಿಸುವ ಚಿಂತಾಮಣಿಗಳು.ಚೆನ್ನಮಲ್ಲಿಕಾರ್ಜುನಯ್ಯನ ನಚ್ಚಿನ ಗಿರಿಯಸುತ್ತಿ ನೋಡುತ ಬಂದು ಕದಳಿಯ ಬನವ ಕಂಡೆನಾನು. ಚೆನ್ನಮಲ್ಲಿಕಾರ್ಜುನಯ್ಯನ ಪ್ರೀತಿಯ ತಾಣ ಶ್ರೀಶೈಲ. ಶ್ರೀ

ಗಿರಿಯನ್ನು ಹತ್ತಿದೆ ನಡೆದಾಡಿದೆ ನೋಡಿದೆ. ತಿರುಗಾಡುತ ಬಂದೆ. ಕದಳಿವನವಕಂಡೆ.
ಶ್ರೀಶೈಲ ಕದಳೀವನದ ಬಗೆಗೆ ಅಕ್ಕಮಹಾದೇವಿಯವರಿಗೆ ಎಷ್ಟೊಂದು ಉನ್ನತವಾದ ಭಾವನೆಗಳಿವೆ ನೋಡಿರಿ. ಆಶ್ಚರ್ಯವಾಗುತ್ತದೆ. ಅಲ್ಲಿನ ಗಿಡಮರಸಸ್ಯ, ಕಲ್ಲು, ಮರಳು, ಬಾಳೆಮರ ಎಲ್ಲವೂ ಅವರಿಗೆ ಫಲದಾಯಕಗಳೆ .ಕೊನೆಗೆ ಆ ಭೂಮಿಕೂಡ ಪವಿತ್ರಕ್ಷೇತ್ರ. ಚೆನ್ನಮಲ್ಲಿಕಾರ್ಜುನನಿಗೆ ಹಿರಿದಾಗಿ ಮಾರುಹೋದ ಅಕ್ಕಮಹಾದೇವಿಯವರು ಪರಮಾತ್ಮನಿಗೆ ಇಷ್ಟವಾದುದೆಲ್ಲವೂ ಅವನ ಸಾನ್ನಿಧ್ಯದ ತಾಣ ಎಂದು ಕರೆಸಿಕೊಂಡುದೆಲ್ಲವೂ ಪುಣ್ಯಕ್ಷೇತ್ರವಾಗಿದೆ. ಅದರ ಹಿರಿಮೆಯನ್ನು ಅವರಿಗೆ ಎಷ್ಟು ಕೊಂಡಾಡಿದರೂ ಕಡಿಮೆಯೆ. ದೃಷ್ಟಿಯಂತೆ ಸೃಷ್ಟಿ. ಅವರ ಭಾವ ನೆಗಳು ಏನಿವೆ ಹಾಗೆ ಅವರಿಗೆ ಶ್ರಿಶೈಲಪರ್ವತ ಕಾಣಬಂದಿದೆ.
.ಇಂತಹ ಶ್ರೀಶೈಲದ ಕದಳೀವನಕ್ಕೆ ಏಕಾಂಗಿಯಾಗಿ, ಜೊತೆಯಾಗಿ ನಡೆದಾಡಿದ ಅನುಭವ ತುಂಬ
ಜನರಿಗೆ ಇದೆ. ದಿವ್ಯಾನುಭೂತಿಯನ್ನು ಪಡೆದಿದ್ದರೆ. ಆದರೆ ಮನುಷ್ಯ ಸಹಜವಾಗಿ ಒಬ್ಬನೆ ಇದ್ದಾಗ ಅನುಭಿಸಿದ ಭಾವನೆಗಳನ್ನು ಇಲ್ಲಿ ಬರೆಯುತ್ತೇನೆ.

3) ವನವೆಲ್ಲ ನೀವೆ ವನದೊಳಗಣ ದೇವತರುವೆಲ್ಲಾ ನೀನೆ .
ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ.
ಚೆನ್ನಮಲ್ಲಿಕಾರ್ಜುನಾ ಸರ್ವಭರಿತನಾಗಿ ಎನಗೇಕೆ ಮುಖದೋರೆ.

## ಪದಗಳ ಅರ್ಥ

ತರು-ವೃಕ್ಷ,
ಖಗ-ಪಕ್ಷಿ,

## ವಚನದ ಅರ್ಥ

ವನವೆಲ್ಲ ನೀವೆ ವನದೊಳಗಣ ದೇವತರುವೆಲ್ಲಾ ನೀನೆ. ಕಾಡೆಲ್ಲವೂ ನೀನೆ ಕಾಡಿನ ದೇವಮರವೆಲ್ಲವೂ ನೀನೆ ಅಕ್ಕನವರು ಮರಗಳನ್ನು ತರು ಎಂದಷ್ಟೆ ಕರೆಯಲಿಲ್ಲ. ದೇವತರು ಎಂದು ಕರೆದರು. ವನವೆಲ್ಲ ಚೆನ್ನಮಲ್ಲಿಕಾರ್ಜುನದೇವರು ವನದ ಮರಗಳೆಲ್ಲವೂ ಚೆನ್ನಮಲ್ಲಿಕಾರ್ಜುನದೇವರು. ತರುವಿನೊಳಗಾಡುವ ಖಗ ಮೃಗವೆಲ್ಲ ನೀನೆ .ಚೆನ್ನಮಲ್ಲಿಕಾರ್ಜುನ ಸರ್ವಭರಿತನಾಗಿ

ಮುಖದೋರಾಎನಗೆ. ಈ ದೇವಮರಗಳಲ್ಲಿ ಆಡುವ,ಹಾರುವ ಪಕ್ಷಿಸಂಕುಲವೆಲ್ಲವೂ ನೀನೆ. ಈ ವನದಲ್ಲಿ ಸುಳಿದಾಡುವ ಪ್ರಾಣಿ ಜಗತ್ತೆಲ್ಲವೂ ನೀನೆ. ಚೆನ್ನಮಲ್ಲಿಕಾರ್ಜುನನೆ ನೀನು ಎಲ್ಲೆಲ್ಲು ಸರ್ವಭರಿತನಾಗಿರುವೆ . ಶ್ರೀಗಿರಿ ಚೆನ್ನಮಲ್ಲಿಕಾರ್ಜುನನ ತಾಣವಾಗಿ ಪ್ರಸಿದ್ಧಿ ಪಡೆದಿದೆ. ಆತನ ಹೆಸರು ಹೇಳುವ ಎಲ್ಲ ನೆಲೆಗಳೂ ಅಕ್ಕನವರಿಗೆ ದಿವ್ಯವಾಗಿಯೆ ಕಾಣುಇವೆ.ಅಲ್ಲಿನ ವನ,ಮರ,ಪಕ್ಷಿ ಪ್ರಾಣಿ ಎಲ್ಲವೂ ದಿವ್ಯವಾಗಿ ಚೆನ್ನಮಲ್ಲಿಕಾರ್ಜುನನ ಕುರುಹಾಗಿಯೆ ಕಾಣುತ್ತವೆ. ಅಲ್ಲಿನ ಮರಗಳು ಕೇವಲ ಮರಗಳಲ್ಲ. ಕಲ್ಪವೃಕ್ಷಗಳು. ಎಲ್ಲದರಲ್ಲಿಯೂ ತನ್ನ ಛಾಪು ತೋರುವ ನೀನು ಸರ್ವತೋಮುಖವಾಗಿ ನಿನ್ನ ದರ್ಶನ ನೀಡು ಎಂದು ಬೇಡಿದ್ದಾರೆ.

**4) ವೇದ ಶಾಸ್ತ್ರ ಪುರಾಣ ಆಗಮಂಗಳೆಲ್ಲ**
**ಕೊಟ್ಟಣವ ಕುಟ್ಟುತ್ತನುಚ್ಚು ತೌಡು ಕಾಣಿಭೋ.**
**ಅವಕುಟ್ಟಲೇಕೆ?**
**ಅತ್ತಲಿತ್ತ ಹರಿವ ಮನದ ಶಿರವನರಿದಡೆ ಬಚ್ಚಬರಿಯ ಬಯಲು**
**ಚೆನ್ನಮಲ್ಲಿಕಾರ್ಜುನಾ.**

### ವಚನದ ಅರ್ಥ

ಶರಣರ ವಚನಗಳೊಂದಿಗೆ ವೇದ, ಶಾಸ್ತ್ರಪುರಾಣ, ಆಗಮಗಳನ್ನು ಹೋಲಿಸಲಾಗಿದೆ. ವೇದ, ಶಾಸ್ತ್ರಪುರಾಣಗಳು ಧಾನ್ಯ ಕುಟ್ಟಿದ ಮೇಲೆ ತಿರುಳು, ಕಾಳು ಪಡೆದು,ತೂರಿದಮೇಲೆ ಹಾರಿಹೋಗುವ ತೌಡು , ಒಟ್ಟು. ಈ ವೇದ ಶಾಸ್ತ್ರಗಳನ್ನು ಕುಟ್ಟಿದರೆ ತೌಡು ಕುಟ್ಟಿ ಕಾಳು ಪಡೆಯಲು ಹೋದಂತೆಯೆ ಸರಿ. ಇವುಗಳ ಅಗತ್ಯ ವಿಲ್ಲ. ಈ ಮನಸ್ಸು ಏನು ಅತ್ತ ಇತ್ತ ಹರಿಯುತ್ತದೆ, ಈ ಮನಸ್ಸನ್ನು, ಅದರ ಮೂಲ ನೆಲೆಯನ್ನು ತಿಳಿದರೆ ಪರಮಾತ್ಮನನ್ನು ತಿಳಿದಂತೆಯೆ. ಪರಮಾತ್ಮ ಬೇರೇನು? ಅದು ಬಚ್ಚಬರಿಯ ಬಯಲು. ಇಲ್ಲಿ ಅಕ್ಕಮಹಾದೇವಿಯವರು ವೇದಗಳ ಬಗೆಗೆ ಹೇಳಿದ ವಚನ ಓದಿ ಓದಿ ವೇದ ವಾದಕ್ಕಿಕ್ಕಿತ್ತು ಎನ್ನುವ ವಚನವನ್ನು ಗಮನಿಸಬೇಕು. ಇವುಗಳ ಜಾಲದ ಗೋಜಲಿನಲ್ಲಿ ಸಿಕ್ಕಿಬೀಳುವುದಕ್ಕಿಂತ ವಿಶ್ವಗುರುಅಕ್ಕಮಹಾದೇವಿಯವರು ಹೇಳಿದ ಮಾರ್ಗದಲ್ಲಿ ವಚನದ ಅಧ್ಯಯನದಲ್ಲಿ ಸಾಗಿದರೆ ಸುಲಭದಲ್ಲಿ ಪರಮಾತ್ಮನನ್ನು ಸಾಧ್ಯಮಾಡಿಕೊಳ್ಳುವುದು ಸತ್ಯ, ಅಕ್ಕನವರ ವಚನಗಳು ಉಪನಿಷತ್ತಿನಂತೆ ನಮ್ಮನ್ನು ನೇರ ಆನಂದಲೋಕಕ್ಕೆ ಕರೆದೊಯ್ಯುತ್ತವೆ.